## **ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ**

***ಸಿ ಸಿ ನಂ. 361/16***

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಮೋಹನ** | ***ಪಿ ಡಬ್ಲ್ಯೂ ಃ 3*** |
| ತಂದೆಯ ಹೆಸರು | : | **ವಸಂತ ಅಡಗಲ್** | ***ಸಿ ಡಬ್ಲ್ಯೂ ಃ 8*** |
| ವಯಸ್ಸು | : | ***42* ವರ್ಷ** | |
| ಉದ್ಯೋಗ | : | **ಪ್ರ.ದ.ಸಹಾಯಕರು, ತಾಲೂಕು ಕಚೇರಿ ವಿಜಯಾಪುರ** | |
| ವಾಸ್ತವ್ಯ | : | **ವಿಜಯಾಪುರ** | |

ಸತ್ಯ ಪ್ರತಿಜ್ಞೆಯ ಮೇರೆಗೆಃ **03-12-2018**

### **ಮುಖ್ಯ ವಿಚಾರಣೆ ಃ ಹಿರಿಯ ಸ ಸ ಅ ರವರಿಂದ**

ನಾನು 2002 ರಲ್ಲಿ ವಿಜಯಾಪುರ ತಹಶೀಲ್ದಾರ್ ಕಚೇರಿಯಲ್ಲಿ ದ್ವಿ.ದ. ಸಹಾಯಕನಾಗಿ ಕೆಲಸ ಮಾಡುತ್ತಿದ್ದೆನು. ಅಂದಾಜು 2002 ನೇ ಇಸವಿಯಲ್ಲಿ ಕಾರವಾರ ಪೊಲೀಸರು ನಮ್ಮ ವಿಜಯಾಪುರ ತಹಶೀಲ್ದಾರ್ ಕಚೇರಿಗೆ ಪಂಚನಾಮೆ ಮಾಡಲು ಬಂದಿದ್ದರು. ಆ ಸಮಯದಲ್ಲಿ ನಾನು ಮತ್ತು ಚಾಸಾ-7 ರವರು ಹಾಜರಿದ್ದು ಸದರಿ ಪಂಚನಾಮೆಗೆ ಸಹಿ ಮಾಡಿದ್ದೇವೆ. ಆ ನಂತರ ಸದರಿ ಪೋಲಿಸರು ಕಚೇರಿಯಿಂದ ಕೆಲವು ದಾಖಲೆಗಳನ್ನು ಜಪ್ತು ಮಾಡಿಕೊಂಡರು. ನಂತರ ಮಧ್ಯಾಹ್ನ ಅಂದಾಜು 1.00 ರಿಂದ 2.00 ಗಂಟೆವರೆಗೆ ಜಪ್ತು ಪಂಚನಾಮೆ ಮಾಡಿ ನನ್ನ ಸಹಿ ಪಡೆದಿದ್ದಾರೆ. ಸದರಿ ಪಂಚನಾಮೆಯನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದು ಅದನ್ನು ನಿ.ಪಿ. 6 ಕ್ಕೆ ಮತ್ತು ಸಾಕ್ಷಿಯ ಸಹಿಯನ್ನು 6(ಎ) ಎಂದು ನಿಶಾನಿಕರಿಸಲಾಯಿತು. ನಾನು ಜಪ್ತು ಮಾಡಿಕೊಂಡ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

**(ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)**

**(**ತೆರೆದ ನ್ಯಾ.ದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**)**

ಓ ಹೇ ಕೇ ಸರಿ ಇದೆ

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಕಾರವಾರ.